ತಿರುಮಲೆ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಅಕ್ಟೋಬರ್ 2020

## ಸಪ್ತಗಿರಿ ಅನುಬಂಧ



ವಿಜಯೀ ಭವ
ವೆಂಕಟಶೈಲಪತೇ!





ನವರಾತ್ರಿ ಗೊಂಬೆಗಳ ಉತ್ಸವಗಳು

ತಿರುಮಲೆ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ



ಸಪ್ತಗಿರಿ ಅನುಬಂಧ

ಸಂಪುಟ -01 ಅಕ್ಟೋಬರ್ - 2020 ಸಂಚಿಕೆ -08

## ವಿಷಯ ಸೂಚಿಕೆ


| | | ಪುಟ |
|---|---|---|
| ಹಿಂದೂ ದೇವರು | ಆನಂದ ನಿಲಯ<br>-ಶ್ರೀಮತಿ. ಎನ್. ಪಾರ್ವತಿ | 32 |
| ಹನ್ನೆರಡು ಆಳ್ವಾರರು | ತೊಂಡರಡಿಪೂಡಿಯಾಳ್ವಾರ್<br>- ಶ್ರೀಮತಿ. ಸಿ.ಎಸ್. ಊರ್ಮಿಳಾ | 34 |
| ಕನ್ನಡ ಹರಿದಾಸವರೇಣ್ಯರು | ಗೋಪಾಲದಾಸರು<br>- ಶ್ರೀಮತಿ. ಸುಧಾಮಧುಸೂದನ್ | 36 |
| ಚಿತ್ರಕಥೆ | ತುಂಬಿಮಾನ್ ಕೊಂಡಿಗೆ ಮೋಕ್ಷ<br>ಕಥೆ - ಶ್ರೀನಿವಾಸ ದೀಕ್ಷಿತರು<br>ಚಿತ್ರಗಳು - ಕೆ. ದ್ವಾರಕನಾಥ್ | 38 |
| ಬಾಲನೀತಿ | ಶ್ರೀ ರಾಮನ ಆದರ್ಶ ನಮಗೆ ಮಾರ್ಗದರ್ಶನ<br>- ಬಿ. ಆರ್. ಶ್ರೀಕಂಠಯ್ಯ | 42 |
| ಪ್ರಜ್ಞಾವಂತ ಬಾಲಕಿ - | ಟಿ. ಎಂ. ಪರ್ವತ ವರ್ಧಿನಿ | 44 |
| ಕ್ವಿಜ್ | -ಶ್ರೀಮತಿ. ಸೂರ್ಯವಂಶಿ | 45 |
| ಚಿತ್ರಲೇಖನ | | 46 |


ಮುಖಚಿತ್ರ - ಆನಂದ ನಿಲಯ

ಹಿಂಬದಿಚಿತ್ರ - ಸರಸ್ವತಿ ಅಲಂಕಾರದಲ್ಲಿ ಶ್ರೀ ಪದ್ಮಾವತಿ ಅಮ್ಮನವರು

# ಆನಂದ ನಿಲಯ

- ಶ್ರೀಮತಿ. ಎನ್. ಪಾರ್ವತಿ



ವೇಂಕಟೇಶ್ವರ ತಿರುಮಲೆಯಲ್ಲಿ ಸ್ವಯಂಭೂವಾಗಿ ಪ್ರತ್ಯಕ್ಷ ದೇವರಾಗಿ ನೆಲೆಸಿದ್ದಾನೆ. ಈ ಕ್ಷೇತ್ರವನ್ನು ಸಂದ ರ್ಶಿಸುವ ಭಕ್ತರ ಕೋರಿಕೆಗಳನ್ನು ಈಡೇರಿಸುವ ಅಭಯ ಪ್ರದಾತನು ಶ್ರೀನಿವಾಸ ದೇವರು.

ತಿರುಮಲೇಶನಿಗೆ ಎಷ್ಟೊಂದು ಹೆಸರುಗಳಿದ್ದರೂ "ಆನಂದನಿಲಯ ವಾಸಿ ಎನ್ನುವ ಹೆಸರು ಸಾರ್ಥಕಗೊಂಡು ಪ್ರಕಾಶಿಸುತ್ತಿದೆ. ತಿರುಮಲೆ ಯಾತ್ರೆಗೆ ಹೋಗುವುದೇ ಒಂದು ಆನಂದಮಯ ಅನುಭವ! ಏಳು ಬೆಟ್ಟಗಳಲ್ಲಿ ವಿಹರಿಸುವುದೇ ಎಲ್ಲಿಲ್ಲದ ಆನಂದ! ಬ್ರಹ್ಮಾಂಡನಾಯಕನ ಸ್ವರ್ಣಮಯವಾದ ಗೃಹ ಆನಂದನಿಲಯವನ್ನು ಕಣ್ಣಿನಿಂದ ದರ್ಶಿಸುವುದೇ ಒಂದು ದಿವ್ಯಾನಂದ! ಆ ಆನಂದನಿಲಯದ ಅಂತರ್ಭಾಗದಲ್ಲಿ ನಿಂತು ಪ್ರತಿಕ್ಷಣವೂ ಭಕ್ತರಿಗಾಗಿ ಕಾಯುತ್ತಿರುವ ಏಳು ಬೆಟ್ಟದೊಡೆಯನನ್ನು ದರ್ಶಿಸುವುದೇ ಒಂದು ಪರಮಾನಂದ! ದರ್ಶಿಸಿದ ಪ್ರತಿ ಭಕ್ತನಿಗೂ ಈ ಅವ್ಯಕ್ತವಾದ ಆನಂದದ ಅನುಭವ ಉಂಟಾಗುತ್ತದೆ, ಪ್ರತಿಬಾರಿಯೂ ಉಂಟಾಗುತ್ತದೆ.

ಶ್ರೀ ಮಹಾವಿಷ್ಣುವು ಲೋಕ ಕಲ್ಯಾಣಕ್ಕಾಗಿ,ಭಕ್ತರಿಗಾಗಿ ವೈಕುಂಠವನ್ನು ಬಿಟ್ಟು ತಿರುಮಲೆ ಕ್ಷೇತ್ರದಲ್ಲಿ 'ವೇಂಕಟೇಶ್ವರ' ಎಂಬ ಹೆಸರಿನಿಂದ ನೆಲೆಸಿದ್ದಾನೆ.

ತೊಂಡಮಾನ್ ಚಕ್ರವರ್ತಿ ನಿರ್ಮಿಸಿದ ಆನಂದನಿಲಯವನ್ನು ಶ್ರೀ ವೇಂಕಟೇಶ್ವರ ಪ್ರವೇಶಿಸಿದ ದಿನದಿಂದ ಭಕ್ತರು ಕೋರಿದ ವರಗಳನ್ನು ನೀಡುವ ಪ್ರತ್ಯಕ್ಷ ದೈವವಾಗಿ ನೆಲೆಸಿದ್ದಾನೆ.

ಹೀಗೆ ಪ್ರತಿ ಭಕ್ತನನ್ನು ಅಡಿಗಡಿಗೂ ಅಣು ಅಣುವಿನಲ್ಲೂ ಆನಂದ ಸಾಗರದಲ್ಲಿ ತೇಲಾಡಿಸುತ್ತಿರುವ ವೇಂಕಟಾದ್ರಿಗೆ 'ಆನಂದಾಚಲ' ಎಂದೂ, ಸ್ವಾಮಿಯವರ ಬಂಗಾರದ ಗೋಪುರಕ್ಕೆ 'ಆನಂದನಿಲಯ ಎಂದೂ ಅಲ್ಲಿ ನೆಲೆಸಿರುವ ಸ್ವಾಮಿಗೆ ''ಆನಂದನಿಲಯವಾಸಿ ಎಂದೂ ಹೆಸರುಗಳು ಪ್ರಸಿದ್ಧಿಯಾಗಿದೆ.

ಆನಂದ ಜನತ್ತ್ವಾತ್ತಂ ಆನಂದ ನಿಲಯಂ ಮಿದುಃ।

ವರಪದ್ಮಾಸನೇ ಸುಸ್ಥಾಂ ವಿಧಾಯ ಕಮಲಾಲಯಂ ॥

ವಕ್ಷಸ್ಥಳದಲ್ಲಿ ಶ್ರೀ ಮಹಾಲಕ್ಷ್ಮಿ ಸಮೇತವಾಗಿ ಪದ್ಮಾಸನದಲ್ಲಿ ವಿರಾಜಿಸಿರುವ ಸಾಕ್ಷಾತ್ ವೈಕುಂಠವಾಸನಾದ ಶ್ರೀ ವೇಂಕಟೇಶ್ವರನೇ ಪ್ರತ್ಯಕ್ಷವಾಗಿ ಇಳಿದು ನೆಲೆಸಿರುವ ಈ ಭೂಲೋಕ ವೈಕುಂಠವಾದ ಈ ದಿವ್ಯ ಸ್ಥಳವನ್ನು ದರ್ಶಿಸಿದ ತಕ್ಷಣವೇ ಅವ್ಯಕ್ತ ಆನಂದವನ್ನು ಪ್ರಸಾದಿಸುತ್ತಾನೆ. ಆದ್ದರಿಂದಲೇ ಇದು "ಆನಂದ ನಿಲಯ" ವೆಂದು ಪ್ರಸಿದ್ಧಿಯಾಗಿದೆ.

ಬಂಗಾರದ ವಿಮಾನದಲ್ಲಿ ಕುಳಿತಿರುವ ಶ್ರೀನಿವಾಸನನ್ನು ದರ್ಶಿಸಿದರೆ ಸರ್ವ ಜೀವಿಗಳ ಪಾಪಗಳು ತೊಲಗುತ್ತವೆ.

ಎಲ್ಲಾ ಯುಗಗಳಲ್ಲಿಯೂ ಎಲ್ಲರಿಗೂ ಎಲ್ಲ ರೀತಿಯ ಪರಮಾದ್ಭುತವಾದ ಆನಂದವನ್ನು ಪ್ರಸಾದಿಸುತ್ತಾ, ಕೋರಿಕೆಗಳನ್ನು ತೀರಿಸುತ್ತಾ ನಿರಂತರವಾಗಿ ಭಕ್ತರನ್ನು ಆಕರ್ಷಿಸುತ್ತಿರುವ ಕ್ಷೇತ್ರವೇ ವೇಂಕಟಾಚಲ, ಪ್ರಸಿದ್ಧಿ ಹೊಂದಿರುವ ಆನಂದಾಚಲದ ಮೇಲಿನ ಈ 'ಆನಂದನಿಲಯ 'ವನ್ನು ಸಂದರ್ಶಿಸಿದರೆ ಭಕ್ತರು ಸರ್ವಾಭೀಷ್ಟಗಳನ್ನು ಹೊಂದುತ್ತಾರೆ.



# ತೊಂಡರಡಿಪ್ಪೊಡಿ ಯಾಳ್ವಾರ್

ಶ್ರೀಮತಿ.ಸಿ.ಎಸ್. ಊರ್ಮಿಳಾ

ಜನನ : ಧನುರ್ಮಾಸ ಜೇಷ್ಠನಕ್ಷತ್ರ

ಸ್ಥಳ : ತಿರುಮಣ್ಣಂ ಗುಡಿ

ಇವರು ತಮಿಳುನಾಡಿನ ಪುಳ್ಳಂ ಬೂತಂಗುಡಿಯ ಸಮೀಪದಲ್ಲಿ ತಿರುಮಂಡಂಗುಡಿಯೆಂಬ ಊರಿನಲ್ಲಿ ಜನಿಸಿದರು. ಇದು ಈಗಿನ ಕುಂಭ ಕೋಣದ ಹತ್ತಿರ ಇದೆ. ಇವರ ತಂದೆಯ ಹೆಸರು ಯಜ್ಞನಾಥ. ತಂದೆ ಯವರು ಇವರಿಗೆ ವಿಪ್ರನಾರಾಯಣ ಎಂದೇ ಹೆಸರಿಟ್ಟರು.ಆಯಾ ಕಾಲದಲ್ಲಿ ಮಾಡಬೇಕಾದ ಜಾತಕರ್ಮಾದಿಗಳು ಸಾಂಗವಾಗಿ ನೆರ ವೇರಿಸಿದರು. ವೇದವೇದಾಂಗಗಳಲ್ಲಿ ಪಾರಂಗತರಾಗಿ ಇವರು ವಿಶ್ವಕ್ಸೇನ ರಿಂದ ಪಂಚ ಸಂಸ್ಕಾರಗಳನ್ನು ಪಡೆದರು. ನಂತರ ನಿನ್ರದೇಶ ಯಾತ್ರೆ ಯನ್ನು ಕೈಗೊಂಡು ಕೊನೆಗೆ ಶ್ರೀರಂಗಕ್ಷೇತ್ರಕ್ಕೇ ಬಂದು ಸೇರಿದರು.ಇವರು ಪ್ರಾರಬ್ಧ ಕರ್ಮದಿಂದಾಗಿ ದೇವದೇವಿಯೆನ್ನುವ ನರ್ತಕಿಯ ಮೋಹ ಜಾಲಕ್ಕೆ ಒಳಗಾದರು.ಅಷ್ಟೇ ಅಲ್ಲ ಕಳ್ಳತನದ ಆಪಾದನೆಗೂ ಒಳಗಾದರು. ಕೊನೆಗೆ ಶ್ರೀರಂಗನಾಥನ ಅನುಗ್ರಹದಿಂದ ಭಗವದ್ಭಕ್ತರಾದರು, ಪಶ್ಚಾತ್ತಾಪದಿಂದ ಬೆಂದ ಇವರು ಪರಮಾತ್ಮನ ಕರುಣೆಯನ್ನು ನೆನೆದು ತಾವು ಭಗವದ್ಭಕ್ತರ,ಭಾಗವತರ ಪಾದಧೂಳಿ ಎಂದು ತಮ್ಮನ್ನು ಅಂದು ಕೊಂಡು ಯಥಾಪ್ರಕಾರ ಕೈಂಕರ್ಯ ನಿಷ್ಟರಾದರು. ತೊಂಡರಡಿಪ್ಪೊಡಿ ಎಂಬ ತಮಿಳು ಶಬ್ದಕ್ಕೆ ಅರ್ಥ ಭಾಗವತರ ಪಾದಧೂಳಿ ತಿರುಮಾಲೈ ಮತ್ತು ತಿರುಪ್ಪಳ್ಳಿಯೆಳುಚ್ಚಿ ಎಂಬುದು ಇವರು ಬರೆದ ಕೃತಿಗಳು ತಿರುಮಾಲೈ

ಯೆಂಬುದು ನಲವತ್ತೈದು ಪಾಶುರಗಳಿಂದ ಕೂಡಿದೆ. ತಿರುಪ್ಪಳ್ಳಿಯೆಳುಚ್ಚಿ ಎಂಬುದು ಹತ್ತು ಪಾಶುರಗಳಿಂದ ಕೂಡಿದ ಸುಪ್ರಭಾತ ಸ್ತೋತ್ರ.ದೇವ ದೇವಿಯೂ ಸಹ ದೇವಸ್ಥಾನದಲ್ಲಿ ಗುಡಿಸಿ ರಂಗವಲ್ಲಿಯನ್ನು ಹಾಕುವ ಕೈಂಕರ್ಯವನ್ನು ಕೈಗೊಂಡು ತನ್ನ ಜನ್ಮವನ್ನು ಸಾರ್ಥಕಪಡಿಸಿ ಕೊಂಡಳು.

**ತಿರುಮಲೈ ಕೃತಿಯ ಎರಡು ಪದ್ಯಗಳು**

ಕಾವಲಿನ್ ಪುಲನೈ ವೈತ್ತು ಕ್ಕಲಿದನೈ ಕ್ಕಡಪ್ಪಪಾಯ್‌ನ್ನು
ನಾವಲಿಟ್ಟು ತರುಹಿನ್ ರೋಮ್ ನಮನ್ ತಮರ್ ತಲೈ ಹಳ್‌ಮಿಾದೇ
ಮೂವುಲಹುಂಡುಮಿಳ್‌ನ್ದ ಮುದಲ್ವ ನಿನ್ನಾ ಮಮ್‌ಕತ್ತ
ಆವಲಿಪ್ಪುಡೈಮೈ ಕಂಡಾಯ್ ಅರಂಗಮಾನಹರುಳಾನೇ।

ಪಚ್ಚೆ ಮಾಮಣಿ ಪೋಲ್ ಮೇನಿ ಪ್ಪವಳವಾಯ್ ಕಮಲ ಚೆಂಗಣ್ ಅಚ್ಚುತಾ ಅಮರರೇರೇ ಆಯರ್ ತಮ್ ಕೊಳುಂದೇ ಯೆನ್ನುಮ್

ಇಚ್ಚು ವೈ ತವಿರಯಾನ್‌ಪೋಯ್ ಇಂದಿರ ಲೋಕ ಮಾಳುಮ್
ಅಚ್ಚುವೈ ಪೆಲಿದುಮ್ ವೇಂಡೇನ್ ಅರಂಗಮಾನ ಹರುಳಾನೇ

ತೊಂಡರಡಿಪ್ಪೊಡಿಯಾಳ್ವಾರರ ಮತ್ತೊಂದು ಕೃತಿ ತಿರುಪ್ಪಳಿಯೈ ಯಿಂದ ಮೊದಲನೆಯ ಪಾಶುರ

ಕದಿರವನ್ ಕುಣಿದಿಶೈ ಚ್ಚಿ ಕರಮ್ ವನ್ದಣೈನ್ದಾನ್
ಕನ್ನೈಯಿರುಳಹನ್‌ರದು ಕಾಲೈಯಮ್ ಪೊಳುದಾಯ್
ಮದುವಿರಿನ್ದೊಳುಹಿನ ಮಾಮಲರೆಲ್ಲಾಮ್
ವಾನವರರಶರ್ಹಳ್ ವಂದುವನ್ದೀಣ್ಢಿ
ಎದಿರ್‌ತಿಶೈ ನಿರೈನ್ದನರ್ ಇವರೊಡುಮ್ ಪುಹನ್ದ
ಇರುಂಗಳಿ ತ್ತೀಟ್ಟಿಮುಮ್ ಪಿಡಿಯೊಡುಮುರಶುಮ್
ಅದಿರದಲಿಲ್ ಅಲೈಕಡಲ್ ಪ್ಪೋನ್ರುಳದು ಎಂಗುಮ್
ಅರಂಗತ್ತಮ್ಮಾ ಪಳ್ಳಿಯೆಳುಂದರುಳಾಯೇ

# ಗೋಪಾಲ ದಾಸರು



- ಶ್ರೀಮತಿ. ಸುಧಾಮಧುಸೂದನ್

ಗೋಪಾಲದಾಸರು ವಿಜಯದಾಸರ ಸಮಸಾಮಯಿಕರಾಗಿದ್ದು, ಅವರ ಅಂತರದಲ್ಲಿ ದಾಸಸಾಹಿತ್ಯ ಪಟ್ಟವನ್ನಲಂಕರಿಸಿ, ಸುಪ್ರಸಿದ್ಧರಾದ ದಾಸವರೇಣ್ಯರು, ಇವರ ಕಾಲ ಕ್ರಿ.ಶ. 1722-1765. ಇವರು ಹುಟ್ಟಿದ್ದು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು ಮೊಸರು ಕಲ್ಲೆಬಳ್ಳಿ. ಇವರೇ ಹಿರಿಯ ಮಕ್ಕಳು. ಇವರಿಗೆ ಮೂವರು ಜನ ತಮ್ಮಂದಿರು. ಇವರ ಮೊದಲ ಹೆಸರು ಭಾಗಣ್ಣ, ಇವರ ತಂದೆಯ ಹೆಸರು ಮುರಾರಿರಾಯ.

ಗೋತ್ರ ಹರಿತಸ, ಇವರ ತಾಯಿ ವೆಂಕಮ್ಮನು ಗಂಡನನ್ನು ಕಳೆದು ಕೊಂಡು ನಿರ್ಘೃಣರಾದ ದಾಯಾದಿಗಳಿಂದ ತಿರಸ್ಕೃತಳಾಗಿ ಚಿಕ್ಕಮಕ್ಕಳನ್ನು ಕಟ್ಟಿ ಕೊಂಡು ಹೊಟ್ಟೆಗಿಲ್ಲದೆ, ಸಂಕಾಪುರಕ್ಕೆ ಬಂದು ಅಲ್ಲಿ ಊರಹೊರಗಿನ ಮಾರುತಿಯ ದೇವಾಲಯದಲ್ಲಿದ್ದು ಊರಲ್ಲಿ ಭಿಕ್ಷೆಬೇಡುತ್ತ ಅತಿಕಷ್ಟದಿಂದ ಜೀವನ ಸಾಗಿಸುತ್ತಿದ್ದಳು. ಭಾಗಣ್ಣನಿಗೆ ಚಿಕ್ಕವಯಸ್ಸಿನಲ್ಲೆ ಧರ್ಮೋಪನಯನವಾಯಿತು, ಬಡತನದಿಂದ ಬೇಸತ್ತ ಭಾಗಣ್ಣ, ಅಂದಿನಿಂದ ಗಾಯತ್ರೀ ಪುನಶ್ಚರಣ ಮಾಡಿ ವಾಕ್ಸಿದ್ಧಿಯನ್ನು ಪಡೆದರು. ಆ ಪ್ರಭಾವದಿಂದ ಜನರಿಗೆ ಭವಿಷ್ಯ ಹೇಳಲಾರಂಭಿಸಿದರು. ಇದರಿಂದ ದ್ರವ್ಯಾರ್ಜನೆಯಾಯಿತು ಮತ್ತು ಅದ್ಭುತಕವಿತಾ ಶಕ್ತಿಯೂ ಬಂದಿತು. ಗದ್ವಾಲ ರಾಜನು ಇವರನ್ನು ಸನ್ಮಾನಿಸಿದನು. ಅಲ್ಲಿಂದ ಮುಂದೆ ಇವರು ತಮ್ಮ ತಾಯಿ ಮತ್ತು ತಮ್ಮಂದಿರೊಂದಿಗೆ ಉತ್ತನೂರಿನಲ್ಲಿ ಹೋಗಿ ವಾಸ ಮಾಡಿದರು ಇವರ ಬಡತನ ನೀಗಿ ದ್ರವ್ಯಾರ್ಜನೆ ಆರಂಭವಾದ್ದರಿಂದ ಇವರು ವಿಶೇಷ ಅನ್ನದಾನ ಮಾಡಲಾರಂಭಿಸಿದರು. ಇಷ್ಟು ಹೊತ್ತಿಗೆ ಇವರು ವಿಜಯದಾಸರ ಶಿಷ್ಯತ್ವವನ್ನುವಹಿಸಿ ದಾಸದೀಕ್ಷೆಪಡೆದು, "ಗೋಪಾಲ ವಿಠಲ " ನೆಂಬ ಅಂಕಿತವನ್ನು ಹೊಂದಿದ್ದರು. ಉತ್ತನೂರಿನ ಹತ್ತಿರವಿರುವ ವೇಣೀಸೋಮ

ಪುರದಲ್ಲಿದ್ದ ವೆಂಕಟ ನರಸಿಂಹಾಚಾರ್ಯರೆಂಬ ದೊಡ್ಡ ಪಂಡಿತರ ಮಗ ವೆಂಕಟ ರಾಮಾಚಾರ್ಯರಿಗೆ ಗೋಪಾಲದಾಸರ ಒಡನಾಟವಾಯಿತು. ಗೋಪಾಲದಾಸರು ಎಲ್ಲ ಕ್ಷೇತ್ರಗಳನ್ನು ಸಂದರ್ಶಿಸಿದ್ದರೂ, ಪಂಡರಪುರಕ್ಕೆ ಹೋಗದಿದ್ದುದರಿಂದ, ವಿಠಲ ಅಶ್ವಾರೋಹಿಯ ವೇಷದಿಂದ ಇವರಿಗೆ ದರ್ಶನ ಕೊಟ್ಟು 'ಅಲೇನಾಹಿ' ಎಂದು ಪಂಡರಪುರಕ್ಕೆ ಬರುವಂತೆ ಆಜ್ಞೆ ಮಾಡಿ ಮರೆಯಾದನು. ಅದರಂತೆಯೇ ಇವರು ಪಂಡರಪುರಕ್ಕೆ ಹೋದರು. ಅಲ್ಲಿ ವಿಠಲನ ದರ್ಶನ ಪಡೆದು ಉಡುಪಿಗೆ ಹೊರಟರು. ಇವರು ತೀರ್ಥ ಕ್ಷೇತ್ರಗಳಿಗೆ ಹೋಗುವಾಗ ಜೊತೆಗೆ ನೂರಾರು ಜನ ಹಿಂಬಾಲಿ ಸುತ್ತಿದ್ದರು. ಉಡುಪಿಯಲ್ಲಿ ಅನೇಕ ಪದ, ಸುಳಾದಿಗಳನ್ನು ರಚಿಸಿ, ಮತ್ತೆ ಉತ್ತನೂರಿಗೆ ಬಂದರು. ಗುರುಗಳಾದ ವಿಜಯದಾಸರ ಆಜ್ಞೆಯಂತೆ ಬ್ಯಾಗವಟ್ಟಿ ಶ್ರೀನಿವಾಸಾಚಾರ್ಯರೆಂಬುವರಿಗೆ ತಮ್ಮ ಆಯುಸ್ಸಿನಲ್ಲಿ 40 ವರ್ಷ ಆಯುರ್ದಾನ ಮಾಡಿದರು. ಅವರೇ ಮುಂದೆ ಜಗನ್ನಾಥದಾಸರೆಂದು ಪ್ರಸಿದ್ಧರಾದರು. ಜಗನ್ನಾಥ ದಾಸರಿಗಿದ್ದ ಉದರ ಶೂಲೆಯು ಗೋಪಾಲದಾಸರಿಗೆ ಬೆನ್ನು ಹತ್ತಿತ್ತು. ಇವರ ತಮ್ಮಂದಿರಾದ ದಾಸಪ್ಪನವರು, 'ವಿಜಯವಿಠ್ಠಲರೇಯ! ಅಸ್ಯದ್ಗುರೋರ್ಗುರು ವಿಜಯರಾಯರ ಪ್ರಿಯಾ' ಎಂದು ದೇವರನ್ನು ಸ್ತೋತ್ರ ಮಾಡಿದರು. ಅದರಿಂದ ಇವರ ಉದರಶೂಲೆ ಪರಿಹಾರವಾಯಿತು.

ಗೋಪಾಲದಾಸರು ತಮ್ಮ ಮೂರು ಜನ ತಮ್ಮಂದಿರಿಗೂ ದಾಸ ದೀಕ್ಷೆ ಕೊಟ್ಟು ದಾಸಪ್ಪ, ಸೀನಪ್ಪ, ರಂಗಪ್ಪನವರಿಗೆ ಕ್ರಮವಾಗಿ, 'ಗುರುಗೋಪಾಲ ವಿಠಲ', 'ವರದ ಗೋಪಾಲವಿಠಲ ಮತ್ತು 'ತಂದೆ ಗೋಪಾಲವಿಠಲ' ರೆಂದು ಅಂಕಿತ ಕೊಟ್ಟರು. ಅದರಲ್ಲಿ ಮೊದಲ ಇಬ್ಬರು ತಮ್ಮಂದಿರೂ ಇವರಂತೆ ಮಹಾಜ್ಞಾನಿ ಗಳೆನಿಸಿದರು, ಕೊನೆಯವರಾದ ರಂಗಪ್ಪನವರ ವಂಶವೊಂದೇ ಮುಂದೆ ಬೆಳೆದುದು. ಇವರ ತಮ್ಮಂದಿರೂ ಅನೇಕ ಪದಪದ್ಯಗಳನ್ನು ರಚಿಸಿರುವರು. ಆ ಕಾಲದಲ್ಲಿ ಉತ್ತರಾದಿ ಮಠದಲ್ಲಿದ್ದ ಶ್ರೀ ಸತ್ಯಬೋಧ ಸ್ವಾಮಿಗಳು ಗೋಪಾಲದಾಸರು ಮತ್ತು ಅವರ ತಮ್ಮಂದಿರಿಬ್ಬರನ್ನು ಕರೆಸಿ, ಇವರ ಜ್ಞಾನವನ್ನು ಪರೀಕ್ಷೆಮಾಡಲೋಸುಗ ಮೂವರನ್ನೂ ಬೇರೆ ಬೇರೆ ಸ್ಥಳಗಳಲ್ಲಿ ಕೂಡಿಸಿ, ಒಂದು ಪದವನ್ನು ಪೂರ್ತಿ ಮಾಡಬೇಕೆಂದು ಆಜ್ಞೆಮಾಡಿದರು, ಇವರು ಒಬ್ಬರಿಗೊಬ್ಬರು ದೂರದಲ್ಲಿದ್ದರೂ, ಅಸಾವೇರಿ ರಾಗದಲ್ಲಿ ಸತ್ಯಬೋಧಸ್ವಾಮಿಗಳ ಮೇಲೆ, ಗೋಪಾಲದಾಸರು ಪಲ್ಲವಿ ಮತ್ತು ಕೊನೆಯ ನುಡಿಯನ್ನೂ ಅವರ ತಮ್ಮಂದಿರಿಬ್ಬರೂ ಎರಡು ನುಡಿಗಳನ್ನೂ ರಚಿಸಿದರು. ಸ್ವಾಮಿಗಳು ಇವರುಗಳ ಕವಿತೆಯನ್ನು ಕೇಳಿ ಇವರ ಜ್ಞಾನಕ್ಕೆ ತಲೆದೂಗಿದರು. ಹೀಗೆ ಇವರು ಅನೇಕ ಮಹಿಮೆಗಳನ್ನು ತೋರಿ,ಉತ್ತನೂರಿನಲ್ಲಿ 1765 ರಲ್ಲಿ ಚಿತ್ರಭಾನು ಸಂವತ್ಸರದ ಪುಷ್ಯ ಬಹುಳ ಅಷ್ಟಮಿಯಂದು ವೈಕುಂಠ ವಾಸಿಗಳಾದರು.

ಚಿತ್ರಕಥೆ


# ತುಂಬಿಮಾನ್ ಕೊಂಡಿಗೆ ಮೋಕ್ಷ

ಕಥೆ:ತೆಲುಗು ಮೂಲ : ಡಿ.ಶ್ರೀನಿವಾಸ ದೀಕ್ಷಿತರು
ಅನುವಾದ : ಶ್ರೀಮತಿ. ಆರ್. ಕೃಷ್ಣವೇಣಿ
ಚಿತ್ರಗಳು : ಕೆ. ದ್ವಾರಕಾನಾಥ್

ತಿರುಪತಿಯಲ್ಲಿ  ವರ್ಷದವರೆಗೆ ಶ್ರೀ ರಾಮಾನುಜಚಾರ್ಯರು ಇದ್ದರು. ಆಗ ಅವರಿಗೆ ಪ್ರತಿದಿನ ಬೇಕಾದ ಹಾಲು, ಮೊಸರು, ತುಪ್ಪವನ್ನು ತುಂಬಿಮಾನ್ ಕೊಂಡಿ ಎಂಬ ಸ್ತ್ರೀಯು ಸಮರ್ಪಿಸುತ್ತಿದ್ದಳು. ತಕ್ಕ ಧನವನ್ನು ನೀಡಲು ಆಕೆಯನ್ನು ಕರೆಸಿದರು ಶ್ರೀ ರಾಮಾನುಜಚಾರ್ಯರು.




ಮೋಕ್ಷ ಧನವಾ... ಅದು ನನ್ನ ಬಳಿ ಇದೆಯೆಂದು ಯಾರು ಹೇಳಿದರು?
ನೀವು ಚೀಟಿಯನ್ನು ಬರೆದು ಕೊಟ್ಟರೆ ಸಾಕು. ಶ್ರೀನಿವಾಸನು ನನಗೆ ಮೋಕ್ಷವನ್ನು ನೀಡುತ್ತಾನೆ.
ಏನು ಬರೆಯಬೇಕು ?
ನನಗೆ ಮೋಕ್ಷವ ನೀಡೆಂದು ಚೀಟಿಯಲ್ಲಿ ಬರೆದು ಕೊಡಿ ಸಾಕು !


ಸರಿ... ಬರೆದು ಕೊಟ್ಟರೆ ಆ ಚೀಟಿಯನ್ನು ಏನು ಮಾಡುತ್ತೀಯಾ?
ಆ ಚೀಟಿಯನ್ನು ತೆಗೆದುಕೊಂಡು ಬೆಟ್ಟ ಹತ್ತಿ ಸ್ವಾಮಿಯವರಿಗೆ ತೋರಿಸುತ್ತೇನೆ. ಆಗ ಅವರು ತಪ್ಪದೇ ನನಗೆ ಮೋಕ್ಷವನ್ನು ನೀಡುತ್ತಾರೆ.
ಆಕೆಯ ವಿಶ್ವಾಸಕ್ಕೆ ಶ್ರೀ ರಾಮಾನುಜರು ಸಂತೋಷಪಟ್ಟರು. ತುಂಬಿಮಾನ್ ಕೊಂಡಿಯು ಹೆಚ್ಚಾಗಿ ಭಗವಂತನ ಸೇವೆಯನ್ನು ಮಾಡಿದ್ದಾಳೆ. ಆದ್ದರಿಂದ ಈಕೆಗೆ ಮೋಕ್ಷವನ್ನು ಅನುಗ್ರಹಿಸಿ ತಂದೇ ! ಎಂದು ಚೀಟಿಯನ್ನು ಬರೆದು ಆಕೆಗೆ ನೀಡಿದರು ಶ್ರೀ ರಾಮಾನುಜರು.
ಸರಿ ... ಹಾಗೆ ಬರೆದು ಕೊಡುತ್ತೇನೆ.
ನಿಮಗೆ ಕೃತಜ್ಞತೆಗಳು




ಮುಂಬರುವ ಸಂಚಿಕೆಯಲ್ಲಿ ಶ್ರೀ ವೆಂಕಟೇಶ್ವರನ ಮತ್ತೊಂದು ದಿವ್ಯಲೀಲಾ ವಿಲಾಸವನ್ನು ದರ್ಶಿಸೋಣ...

ಸ್ವಸ್ತಿ



ನೀತಿಪಾಠ

# ಶ್ರೀ ರಾಮನ ಆದರ್ಶ ನಮಗೆ ಮಾರ್ಗದರ್ಶನ

-ಬಿ.ಆರ್. ಶ್ರೀಕಂಠಯ್ಯ

ಮಕ್ಕಳೇ ನಾವೆಲ್ಲರೂ ರಾಮಾಯಣದ ಬಗ್ಗೆ ಕೇಳಿದ್ದೇವೆ. ಶ್ರೀ ರಾಮನ ಆದರ್ಶ ಜೀವನ, ತಾಳ್ಮೆನಮಗೆ ಮಾರ್ಗದರ್ಶನ. ತಾನು ಎಲ್ಲೂ ಅವತಾರ ಪುರುಷ ಎಂದು ತೋರಿಸಿಕೊಳ್ಳಲಿಲ್ಲ. ಸಾಮಾನ್ಯ ಮನುಷ್ಯನಂತೆ ವ್ಯವಹರಿಸಿ, ಆದರ್ಶ ರಾಜನಾಗಿ, ಸೀತಾ ಪತಿಯಾಗಿ, ಕೌಸಲ್ಯೆಯ ಮಗನಾಗಿ, ತನ್ನ ತಮ್ಮಂದಿರಿಗೆ ಅಣ್ಣನಾಗಿ, ತಂದೆಗೆ ವಿಧೇಯನಾದ ಮಗನಾಗಿ, ಗುರುಗಳ ಆದರ್ಶ ಶಿಷ್ಯನಾಗಿ, ಪ್ರಜೆಗಳ ಗೌರವಕ್ಕೆ ಪಾತ್ರನಾಗಿ ಎಲ್ಲರಿಗೂ ಸರಿಸಮಾನವಾದ ನ್ಯಾಯವನ್ನು ದೊರಕಿಸಿಕೊಟ್ಟಂತಹ ಮಹಾಪುರುಷ. ರಾಮರಾಜ್ಯದಲ್ಲಿ ಒಂದು ನಾಯಿ ಮತ್ತು ಪಕ್ಷಿ ಕೂಡ ತನ್ನ ದೂರನ್ನು ರಾಜನ ಹತ್ತಿರ ತಂದು ನ್ಯಾಯವನ್ನು ಪಡೆದುಕೊಂಡ ವಿಷಯ ಎಲ್ಲರಿಗೂ ತಿಳಿದಿದೆ.

ಪಿತೃವಾಕ್ಯ ಪರಿಪಾಲನೆಯಲ್ಲಿ ರಾಮನಂತಿರಬೇಕು. ತಂದೆಯಾದ ದಶರಥನು ಮಾತೆ ಕೈಕೇಯಿಗೆ ಕೊಟ್ಟ ವರಗಳ ಪ್ರಕಾರ ಶ್ರೀ ರಾಮನು ೧೪ ವರ್ಷಗಳ ಕಾಲ ವನವಾಸವನ್ನು ಮಾಡಬೇಕಾಗುತ್ತದೆ. ಯಾವ ಪ್ರಶ್ನೆಯನ್ನು ಮಾಡದೆ ವನವಾಸಕ್ಕೆ ಹೊರಡುತ್ತಾನೆ. ಶ್ರೀರಾಮನ ಜೊತೆಯಲ್ಲಿ ಪತಿವ್ರತೆಯಾದ ಸೀತೆ ಮತ್ತು ವಿಧೇಯನಾದ ತಮ್ಮ ಲಕ್ಷ್ಮಣನೂ ಕೂಡ ಅಣ್ಣನನ್ನು ಅನುಸರಿಸಿ ವನವಾಸಕ್ಕೆ ತೆರಳುತ್ತಾರೆ. ವನವಾಸ ಕಾಲದಲ್ಲಿ, ಮೋಸದಿಂದ ಲಂಕಾಧಿಪತಿಯಾದ ರಾವಣನು, ರಾಮ ಲಕ್ಷ್ಮಣರು ಕುಟೀರದಲ್ಲಿಲ್ಲದ ಸಮಯದಲ್ಲಿ ಸೀತೆಯನ್ನು ಮಾಯಾವೇಷದಲ್ಲಿ ಬಂದು ಅಪಹರಿಸುತ್ತಾನೆ. ಎಲ್ಲರ ಸಹಾಯದಿಂದ ಸೀತೆಯಿರುವ ಸ್ಥಳ ತಿಳಿಯುತ್ತದೆ. ನಂತರ ಯುದ್ಧವಾಗುತ್ತದೆ.

ಕ್ಷಮಾಗುಣದ ಪ್ರತೀಕ ಶ್ರೀರಾಮ. ರಾವಣ ಬಂದು ಸೀತೆಯನ್ನು ಒಪ್ಪಿಸಿದರೆ, ನಾನು ಅವನನ್ನು ಕ್ಷಮಿಸುತ್ತೇನೆ ಎಂದು ಹೇಳಿದ ಮಹಾ ಪುರುಷ. ಅಹಂಕಾರ ಮದದಿಂದ ಕೂಡಿದ ರಾವಣ ಇದಕ್ಕೆ ಒಪ್ಪಲಿಲ್ಲ. ಮೊದಲೇ

ಸಾಧ್ವಿಯಾದ ವಿಭೀಷಣನು ಅಣ್ಣನನ್ನು ತೊರೆದಿದ್ದನು. ತಮ್ಮಂದಿರನ್ನು, ಮಕ್ಕಳನ್ನು, ಮಿತ್ರರನ್ನು ಮತ್ತು ಎಲ್ಲರನ್ನೂ ಕಳೆದುಕೊಂಡ ಮೇಲೆ, ಯಾರ ಮಾತನ್ನೂ ಕೇಳದೇ, ರಣರಂಗಕ್ಕೆ ಬಂದು ರಾಮನೊಡನೆ ಯುದ್ಧ ಮಾಡುತ್ತಾನೆ.ರಾಮನು ರಾವಣನನ್ನು ಘೋರಯುದ್ಧ ಮಾಡಿ ಸೋಲಿಸಿದನು.ತನ್ನ ರಥ ಮತ್ತು ಎಲ್ಲವನ್ನು ಕಳೆದುಕೊಂಡು, ಗಾಯಗೊಂಡು ನಿಂತಿದ್ದ ರಾವಣನನ್ನು ನೋಡಿ ಹೇಳುತ್ತಾನೆ "ನೀನು ಧಣಿದ್ದಿದ್ದೀಯ, ಹೋಗಿ ವಿಶ್ರಾಂತಿ ಪಡೆದು ಹೊಸ ರಥ ಮತ್ತು ಆಯುಧಗಳೊಂದಿಗೆ ಬಾ". ಇಂತಹ ಗುಣವನ್ನು ನಾವು ಬೇರೆ ಯಾರಲ್ಲೂ ಕಾಣಲು ಸಾಧ್ಯವಿಲ್ಲ.

ಶ್ರೀ ರಾಮನಿಗೆ ತಮ್ಮಂದ್ದಿರಲ್ಲಿದ್ದ ಪ್ರೇಮ ಬಹಳ ಅಗಾಧವಾದುದು. ಇಲ್ಲಿ ಭರತನು ವನವಾಸದಲ್ಲಿದ್ದ ಅಣ್ಣನನ್ನು ವಾಪಸ್ಸು ಅಯೋಧ್ಯೆಗೆ ಕರೆದುಕೊಂಡು ಹೋಗಲು ಬರುತ್ತಾನೆ. ಈ ಒಂದು ಅಣ್ಣ - ತಮ್ಮಂದಿರ ಬಾಂಧವ್ಯವನ್ನು ಡಿ.ವಿ.ಜಿ. ಯವರು.

ರಾಮನುಂ ಭರತನುಂ ತಬ್ಬಿಕೊಂಡತ್ತಂದು।
ಪ್ರೇಮಾಶ್ರುವುಕ್ಕಿ ನದಿಯಾಗಿ ಪರಿದಂದು॥
ಸೀಮೆಯಂ ಮುಟ್ಟಿತಲ ಬಾಂಧಸೌಂದರ್ಯ।
ಕ್ಷೇಮವದು ಜೀವಕ್ಕೆ - ಮಂಕುತಿಮ್ಮ. (೪೬೧)

ಇದರಲ್ಲಿ ರಾಮನೂ ಭರತನೂ ಅರಣ್ಯದಲ್ಲಿ ಸಂಧಿಸಿ ತಬ್ಬಿಕೊಳ್ಳುವ ಸನ್ನಿವೇಶವನ್ನು, ಅಲ್ಲಿ ಅಣ್ಣತಮ್ಮಂದಿರ ಬಾಂಧವ್ಯ ಎಂತಹದು ಎಂಬ ಆದರ್ಶವನ್ನು ಡಿ.ವಿ.ಜಿ.ಯವರು ನಮಗೆ ತಿಳಿಸಿ ಕೊಟ್ಟಿದ್ದಾರೆ. ಹಾಗೆಯೇ ಇಂದ್ರಜಿತು ಲಕ್ಷ್ಮಣನ ಮೇಲೆ ಶಕ್ತ್ಯಾಯುಧವನ್ನು ಪ್ರಯೋಗಿಸಿದಾಗ, ಅವನು ಮೂರ್ಛಿತನಾಗಿ ಬಿದ್ದುಬಿಟ್ಟ. ಶ್ರೀ ರಾಮನಿಗೆ ಅವನನ್ನು ನೋಡಿ ಬಹಳ ದುಃಖವಾಯಿತು, ಆಗ ಹೇಳುತ್ತಾನೆ.

ಶಕ್ಯಾಸೀತಾಸಮಾ ನಾರೀ ಮರ್ತ್ಯಲೋಕೇ ವಿಚಿಗ್ವತಾ।
ನ ಲಕ್ಷ್ಮಣಸಮೋ ಭ್ರಾತಾ ಸಚಿವಃಸಾಂಪರಾಯಿಕಃ॥
ದೇಶೇ ದೇಶೇ ಕಲತ್ರಾಣಿ ದೇಶೇ ದೇಶೇ ಚ ಬಾನ್ಧವಾಃ।
ತಂ ತು ದೇಶಂ ನ ಪಶ್ಯಾಮಿ ಯತ್ರ ಭ್ರಾತಾ ಸಹೋದರಃ॥

ರಾಮನು ಹೇಳಿದ ಈ ಮಾತು ಎಷ್ಟು ಗಹನವಾದದ್ದು, ಹೆಂಡತಿ, ಅತ್ತೆ - ಮಾವ, ಇತ್ಯಾದಿ ಎಲ್ಲರೂ ಸಿಗುತ್ತಾರೆ, ಆದರೇ "ಒಡಹುಟ್ಟಿದ" ಅಣ್ಣ ತಮ್ಮಂದಿರು ಮಾತ್ರ ಯಾವ ದೇಶದಲ್ಲಿಯೂ ದೊರಕುವುದಿಲ್ಲ ಎಂದು ಪ್ರಲಾಪಿಸುತ್ತಾನೆ. ಈ ರಾಮನ ವಾಣಿ ಎಲ್ಲರಿಗೂ ಅನ್ವಯಿಸುತ್ತದೆ ಎಂದು ನನ್ನ ಅನಿಸಿಕೆ, ಮಕ್ಕಳೆ! ಈ ರಾಮನ ಆದರ್ಶ ನಮಗೆಲ್ಲರಿಗೂ ಮಾರ್ಗದರ್ಶನವಲ್ಲವೇ?

# ಪ್ರಜ್ಞಾವಂತ ಬಾಲಕಿ



**ಹೆಸರು :** ಟಿ.ಎಂ. ಪರ್ವತ ವರ್ಧಿನಿ

**ಜನನ :** 12-05-2006

**ತರಗತಿ : -** 9ನೇ ತರಗತಿ

**ತಂದೆಯ ಹೆಸರು :** ಶ್ರೀ.ಟಿ.ಎಸ್.ಮಹೇಂದ್ರಕುಮಾರ್

**ತಾಯಿಯ ಹೆಸರು :** ಶ್ರೀಮತಿ. ಟಿ.ಭವಾನಿ

**ಪಾಠಶಾಲೆಯ ಹೆಸರು :** ಸ್ಪ್ರಿಂಗ್ ಡೇಲ್ ಪಬ್ಲಿಕ್ ಶಾಲೆ, ಕರಕಂಬಾಡಿ ರಸ್ತೆ, ತಿರುಪತಿ

**ಲಭಿಸಿರುವ ಬಹುಮಾನಗಳು:**

2017 -2018 - ಜಿಲ್ಲಾ ಭಗವದ್ಗೀತೆಯ ಸ್ಪರ್ಧೆಯಲ್ಲಿ - 2 ನೇ ಬಹುಮಾನ
ಸ್ಪೆಲ್ ಬೀ ಸ್ಪರ್ಧೆಯಲ್ಲಿ - 1 ನೇ ಬಹುಮಾನ

2018 -2019 - ಜಿಲ್ಲಾ ಭಗವದ್ಗೀತೆಯ ಸ್ಪರ್ಧೆಯಲ್ಲಿ 1 ನೇ ಬಹುಮಾನ
ಉಚ್ಛಾರಣಾ ವ್ಯಕ್ತೀಕರಣ ಸ್ಪರ್ಧೆಯಲ್ಲಿ - 1 ನೇ ಬಹುಮಾನ
ಗಣಿತ ಮೇರಥಾನ್‌ನಲ್ಲಿ - 1 ನೇ ಬಹುಮಾನ
ಅಂದವಾದ ಕೈ ಬರಹದ ಸ್ಪರ್ಧೆಯಲ್ಲಿ - 1 ನೇ ಬಹುಮಾನ
ವಿವಿಧ ವಿಭಾಗಗಳಲ್ಲಿ ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ - 1 ನೇ ಬಹುಮಾನ

2019-2020 - ಭಗವದ್ಗೀತೆ ಸ್ಪರ್ಧೆಯಲ್ಲಿ - 2 ನೇ ಬಹುಮಾನ
ಉಚ್ಛಾರಣಾ ವ್ಯಕ್ತೀಕರಣ ಸ್ಪರ್ಧೆಯಲ್ಲಿ - 1 ನೇ ಬಹುಮಾನ
ಇಸ್ಕಾನ್ ಮೌಖಿಕ ಸ್ಪರ್ಧೆಯಲ್ಲಿ - 1 ನೇ ಬಹುಮಾನ
ಚಿತ್ರಕಲಾ ಸ್ಪರ್ಧೆಯಲ್ಲಿ - 2 ನೇ ಬಹುಮಾನ
ತೆಲುಗಿನಲ್ಲೇ ಮಾತನಾಡುವ ಸ್ಪರ್ಧೆ- 3 ನೆ ಯ ಬಹುಮಾನ
ಪ್ರತಿಭಾಶಾಲಿ ಬರಹದ ಸ್ಪರ್ಧೆಯಲ್ಲಿ ಬಹುಮಾನ
ಆಟದ ಸ್ಪರ್ಧೆ - ಓಟದ ಸ್ಪರ್ಧೆಯಲ್ಲಿ - 1 ನೇ ಬಹುಮಾನ
ರಾಕ್, ಪೇಪರ್ ಮತ್ತು ಸಿಜರ್ಸ್ ಸ್ಪರ್ಧೆಯಲ್ಲಿ - 1 ನೇ ಬಹುಮಾನ
ಪ್ರತ್ಯೇಕ ಪ್ರತಿಭೆ - ನಾಟ್ಯ , ಸಂಗೀತ.

1. ಬೆಂಗಳೂರಿನಲ್ಲಿನ ಕಾಳಿಕಾ ದುರ್ಗಾ ಮಂದಿರದಲ್ಲಿ ನಾಟ್ಯ ಪ್ರದರ್ಶನ.
2. ಶಿಲ್ಪಾರಾಮಂ ತಿರುಪತಿಯಲ್ಲಿ ನೃತ್ಯ ಪ್ರದರ್ಶನ.
3. ತಿರುಪತಿಯಲ್ಲಿ ನಡೆದ ಕಾರ್ತೀಕ ದೀಪೋತ್ಸವದಲ್ಲಿ ನಾಟ್ಯ ಪ್ರದರ್ಶನ.
4. ತಿರುಪತಿ ನಗರ ಪುರಪಾಲಿಕೆ ಸಂಘದವರು ನಿರ್ವಹಿಸಿದ ಬಾಲ ದಿನೋತ್ಸವದ ಉತ್ಸವದಲ್ಲಿ ನಾಟ್ಯ ಪ್ರದರ್ಶನ.

# ಕ್ವಿಜ್

-ನಿರ್ವಹಣೆ ಶ್ರೀಮತಿ. ಸೂರ್ಯವಂಶಿ

1) ಭಾಗವತವನ್ನು ರಚಿಸಿದವರು ಯಾರು ?

ಅ) ವಸಿಷ್ಠ    ಆ) ವಿಶ್ವಾಮಿತ್ರ

ಇ) ಗರ್ಗಾಚಾರ್ಯ    ಈ) ವ್ಯಾಸಮಹರ್ಷಿ

2) ಶ್ರೀ ಕೃಷ್ಣನಿಗೆ ಜಾತಕರ್ಮಗಳನ್ನು ಮಾಡಿದ ಗುರುಗಳು ಯಾರು?

ಅ) ವ್ಯಾಸರು    ಆ) ಕೃಪಾಚಾರ್ಯರು

ಇ) ದ್ರೋಣಾಚಾರ್ಯರು    ಈ) ಗಾರ್ಗಾಚಾರ್ಯರು

3) ಶ್ರೀಕೃಷ್ಣ - ರುಕ್ಮಿಣಿಯರ ಮಗ ಯಾರು?

ಅ) ದುಷ್ಟದ್ಯುಮ್ನ    ಆ) ಪ್ರದ್ಯುಮ್ನ

ಇ) ಅಭಿಮನ್ಯು    ಈ) ಶ್ರುತಿಕೀರ್ತಿ

4) ಅರ್ಜುನ -ಸುಭದ್ರೆಯರ ಮಗ ಯಾರು?

ಅ) ನಕುಲ    ಆ) ಘಟೋತ್ಕಚ

ಇ) ಅಭಿಮನ್ಯು    ಈ) ವಿಚಿತ್ರವೀರ್ಯ

5) ಪರಿಕ್ಷಿತ್ ರಾಜನ ತಂದೆ ಯಾರು?

ಅ) ಅಭಿಮನ್ಯು    ಆ) ಭೀಮ

ಇ) ಅರ್ಜುನ    ಈ) ಸಹದೇವ

6) ಭೀಷ್ಮಕನ ಮಗಳು ಯಾರು?

ಅ) ಸುಭದ್ರೆ    ಆ) ಉತ್ತರೆ

ಇ) ದ್ರೌಪದಿ    ಈ) ರುಕ್ಮಿಣಿ

7) ದುರ್ಯೋಧನನಿಗೆ ಗದಾ ವಿದ್ಯೆಯನ್ನು ಕಲಿಸಿದ ಗುರು ಯಾರು?

ಅ) ಕೃಷ್ಣ    ಆ) ಕೃಪಾಚಾರ್ಯ

ಇ) ಬಲರಾಮ    ಈ) ದ್ರೋಣಾಚಾರ್ಯ


• • • • • • • • • • • •

ಉತ್ತರಗಳು:

1) ಈ 2) ಈ 3) ಆ 4) ಇ 5) ಅ 6) ಈ 7) ಇ

# ಚಿತ್ರಲೇಖನ

ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



ಮೇಲಿನ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...





ಚಿಕ್ಕ ಮಕ್ಕಳ ಪೌರಾಣಿಕ ವೇಷಧಾರಣೆ

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams printing on 25-09-2020. Regd. with the Registrar of Newspapers under "RNI" No.10742,
Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020



ಸರಸ್ವತಿ ದೇವಿ ಅಲಂಕಾರದಲ್ಲಿ
ಶ್ರೀ ಪದ್ಮಾವತೀ ಅಮ್ಮನವರು